5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10001/2022

ಪಿಡಬ್ಲೂ- 04
ಸಿಡಬ್ಲೂ- 05

| | | |
|---|---|---|
| ಸಾಕ್ಷಿ ಹೆಸರು | - | ಶರತ್ ಕುಮಾರ್ |
| ತಂದೆ ಹೆಸರು | - | ಎಸ್ ರಮೇಶ್ ಕುಮಾರ್ |
| ವಯಸ್ಸು | - | 27 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ರಿಪ್ಪನ್ ಪೇಟೆ |

ಪ್ರಮಾಣ ವಚನ ಭೋದಿಸಿದ ದಿನಾಂಕಃ 02-09-2023.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನನಗೆ ಪ್ರಾ ಸಾ 3 ರವರ ಪರಿಚಯ ಇದೆ. ನನಗೆ ಪ್ರಾ ಸಾ -1 ಗೊತ್ತು. ನನಗೆ 1 ನೇ ಆರೋಪಿ ಗೊತ್ತು. ದಾರಿಯಲ್ಲಿ ನಾವು ಕಾರಿನಲ್ಲಿ ಹೋಗುತ್ತಿದ್ದಾಗ ರಿಪ್ಪನ್ ಪೇಟೆ ಪೋಲೀಸ್ ಠಾಣೆಯ ಪೋಲೀಸರು ಕರೆದು ಒಂದು ದಾಖಲೆಗೆ ಸಹಿ ಪಡೆದಿರುತ್ತಾರೆ. ಸದರಿ ದಾಖಲೆ ಪೋಲೀಸ್ ನೋಟೀಸ್ ಆಗಿದ್ದು ಸದರಿ ನೋಟೀಸ್ ಈಗಾಗಲೇ ನಿಪಿ -7 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ -7(ಬಿ) ಎಂದು ಗುರುತಿಸಲಾಯಿತು.

ಸುಮಾರು 4 ವರ್ಷದ ಕೆಳಗೆ ರಿಪ್ಪನ್ ಪೇಟೆ ಪೋಲೀಸರು ಬೆಳಗಿನ ಸಮಯದಲ್ಲಿ ನನ್ನು ಮತ್ತು ಚಾಸಾ-3 ರವರನ್ನು ಪೋಲೀಸ್ ಠಾಣೆಗೆ ಕರೆಸಿರುತ್ತಾರೆ. ಆ ಸಮಯದಲ್ಲಿ ರಿಪ್ಪನ್ ಪೇಟೆ ಪೋಲೀಸರು ಫೋಟೋ ತೆಗೆಸಿರುತ್ತಾರೆ. ಆ ಸಮಯದಲ್ಲಿ ನನ್ನ ಸಮಕ್ಷಮ ಪೋಲೀಸರು ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಆ ಸಮಯದಲ್ಲಿ ಪೋಲೀಸರು ನನ್ನ ಮತ್ತು 1 ನೇ ಆರೋಪಿಯನ್ನು ನಿಲ್ಲಿಸಿ ಫೋಟೋವನ್ನು ತೆಗೆಸಿರುತ್ತಾರೆ. ಸದರಿ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ -9 ಎಂದು ಗುರುತಿಸಲಾಗಿದೆ. ನಿಪಿ -9 ಫೋಟೋದಲ್ಲಿ 1 ನೇ ಆರೋಪಿ ತನ್ನ ಕೈಯ್ಯಲ್ಲಿ ನೂಲಿನ ರೀತಿ ಬಟ್ಟೆ ಸುತ್ತಿದ್ದನ್ನು

ಹಿಡಿದುಕೊಂಡಿದ್ದು ಆದರೆ ಏನು ಹಿಡಿದುಕೊಂಡಿದ್ದಾನೆ ಎಂದು ಹೇಳಲು ಆಗುವುದಿಲ್ಲ. ಪೋಲೀಸರು ಪುನಃ ಏನೂ ಮಾಡಿಲ್ಲ , ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸದರಿ ದಾಖಲೆ ಅಮಾನತ್ತುಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ -8 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ -8(ಬಿ) ಎಂದು ಗುರುತಿಸಲಾಯಿತು. ಮು ಮಾ -1 ರ ಮೇಲೆ ಕವರಿನ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ.

ನಾನು ನಿಪಿ -8 ಕ್ಕೆ ಸಹಿ ಮಾಡಿದ ಸಂದರ್ಭದಲ್ಲಿ ಮು ಮಾ - 1 ಪೋಲೀಸ್ ಠಾಣೆಯ ಟೇಬಲ್ ಮೇಲೆ ಇತ್ತು. ಮು ಮಾ -1 ನ್ನು ಪೋಲೀಸ್ ಠಾಣೆಗೆ ಯಾರು ತಂದಿದ್ದರು ಎಂದು ಗೊತ್ತಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಮು ಮಾ -1 ನ್ನು 1ನೇ ಆರೋಪಿಯು ತನ್ನ ಪ್ಯಾಂಟಿನ ಜೇಬಿನಿಂದ ತೆಗೆದು ಹಾಜರುಪಡಿಸಿದ್ದ ಅದನ್ನು ಪೋಲೀಸರು ಬಿಳಿ ಬಟ್ಟೆಯಿಂದ ಸುತ್ತಿ ಸೀಲ್ ಮಾಡಿ ಅದಕ್ಕೆ ಎನ್ ಎಂ ಎಂದು ಮೊಹರು ಹಾಕಿ ನನ್ನ ಮತ್ತು ಪ್ರಾ ಸಾ -3 ರವರ ಹಾಗೂ 1ನೇ ಆರೋಪಿಯ ಸಹಿವುಳ್ಳ ಲೇಬಲ್ ನ್ನು ಅಂಟಿಸಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ನಿಪಿ -8 ರಂತೆ ಬೆಃ 11 ರಿಂದ 12 ಗಂಟೆ ವರೆಗೆ ಜಪ್ತು ಪಂಚನಾಮೆ ಜರುಗಿಸಿ ನನ ಮತ್ತು ಪ್ರಾ ಸಾ -3 ರವರ ಸಹಿ ಪಡೆದರು ಅದಕ್ಕೆ ನಾನು ಓದಿ ನೋಡಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ -9 ರಲ್ಲಿ 1ನೇ ಆರೋಪಿ ಮು ಮಾ - 1 ನ್ನು ಹಿಡಿದುಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಾನು ಡಿಗ್ರಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಸಾಮಾನ್ಯವಾಗಿ ಯಾವುದೇ ದಾಖಲೆಗಳಿಗೆ ಸಹಿ ಮಾಡುವಾಗ ಓದಿ ತಿಳಿದುಕೊಂಡು ಸಹಿ ಮಾಡಬೇಕು ಎಂದರೆ ಹೌದು. ಪೋಲೀಸರು ನನ್ನ ಸಹಿಯನ್ನು ಪಡೆಯುವಾಗ ಹೆದರಿಸಲಿಲ್ಲ , ಬಲವಂತವಾಗಿ ಪಡೆಯಲಿಲ್ಲ ಎಂದರೆ ಹೌದು.

1ನೇ ಆರೋಪಿ ನನ್ನ ಸ್ನೇಹಿತನಾಗಿರುವುದರಿಂದ ಆತನಿಗೆ ಮತ್ತು ಆತನ ಸ್ನೇಹಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದರೆ ಆರೋಪಿತರು ಮತ್ತು ನಾನು ಒಂದೇ ಊರಿನವರಾಗಿರುತ್ತೇವೆ.

ಪಾಟೀ ಸವಾಲುಃ 1ನೇ ಆರೋಪಿತನ ಪರ ವಕೀಲರಿಂದಃ

ನಿಪಿ -8 ನ್ನು ಪೋಲೀಸರು ನನಗೆ ಓದಿ ಹೇಳಲಿಲ್ಲ.

ಪಾಟೀ ಸವಾಲುಃ 2 ರಿಂದ 4ನೇ ಆರೋಪಿತರ ಪರ ವಕೀಲರಿಂದಃ

1ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).